# ಇಂತಿಂಥಾದ್ದೆಲ್ಲವು ಬರಲಿ ನಿಶ್ಚಿಂತೆಂಬುದು

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 55.
2. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Prof. S.K. Ramachandra Rao and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
3. **Note:** Singer has followed these wordings.

ರಾಗ: ಪಂತುವರಾಳಿ ತಾಳ: ಏಕ

ಇಂತಿಂಥಾದ್ದೆಲ್ಲವು ಬರಲಿ, ನಿ-
ಶ್ಚಿಂತೆಂಬುದು ನಿಜವಾಗಿರಲಿ || ಪ ||

ಬಡತನವೆಂಬುದು ಕಡೆತನಕಿರಲಿ
ಒಡವೆ ವಸ್ತುಗಳು ಹಾಳಾಗ್ಹೋಗಲಿ
ನಡೆಯುವ ದಾರಿ ಎನ್ನ ಬಿಟ್ಹೋಗಲಿ
ಅಡವಿಲಿ ಗಿಡಗಳು ಸಿಗದ್ಹಾಗ್ಹೋಗಲಿ || 1 ||

ಉದ್ಯೋಗವೆಂಬುದು ಮೊದಲೇ ಹೋಗಲಿ
ಬುದ್ಧಿಯು ಎನಗೆ ಮದಡಿಸಿ ಹೋಗಲಿ
ಮದ್ದುಹಾಕಿ ಎನ್ನನು ಕೊಲ್ಲಲಿ
ಹದ್ದು ನಾಯಿ ಹರಕೊಂಡು ತಿನ್ನಲಿ || 2 ||

ಗಂಡಸುತನ ಎನಗಿರದ್ಹಾಗ್ಹೋಗಲಿ
ಹೆಂಡಿರು ಮಕ್ಕಳು ಎನ್ನನು ಬಿಡಲಿ
ಕುಂಡೆ ಮಂಡೆ ಎಲ್ಲಾರುದಿಯಲಿ
ಭಂಡುಮಾಡಿ ಜನರೆಲ್ಲ ನಗಲಿ || 3 ||

ಡಾಂಭಿಕ ಇವನೆಂತೆಲ್ಲರು ಎನಲಿ
ಅಂಬರ ಮುರಕೊಂಡು ಮೇಲೆ ಬೀಳಲಿ
ನಂಬಿಕೆ ಎನ್ನಲಿರದ್ಹಾಗ್ಹೋಗಲಿ
ಡೊಂಬಿ ಸೂಳೆಮಗನೆಂತೆನಲಿ || 4 ||

ಆಶಾಪಂಥ ನಡೆಯದ್ಹಾಗ್ಹೋಗಲಿ
ಹಾಸ್ಯಮಾಡಿ ಜನರು ನಗಲಿ
ಈಶ ಪುರಂದರವಿಠಲನ ನಾಮ-
ದಾಶೆ ಒಂದೇ ಮನದಲ್ಲಿ ಇರಲಿ || 5 ||

**Classification:** Keerthane
**Ankita:** purandara vittala
**Location:** NA
**Category:** mukti marga, virakti,
**Sub-Category:** chinte, badava, abharana, dAri, kaadu, buddi, haddu, nayi, patni, makkalu, jana, akasha, Ase, mana,
**Pravachana:** NA
**Explanation:** NA